- - ಓ ಎಸ್ ನಂ. 97/2021

ಪಿ.ಡಬ್ಲ್ಯೂ:2

ದಿನಾಂಕ : 22-07-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ **3 ರಿಂದ 5 ನೇ** ಪ್ರತಿವಾದಿ ಪರ **ಶ್ರೀ ಇ ಡಿ ಎಂ** ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿಲ್ಲ . ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ . ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ವಿವರಗಳನ್ನು ನೀಡಿದ್ದೇನೆ ಅದರಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡಿದ್ದೇನೆ . ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲೆಂದು ನಾನೇ ಸ್ವತಃ ಬಂದಿದ್ದೇನೆ ಯಾರೂ ನನ್ನನ್ನು ಸಾಕ್ಷಿ ನುಡಿಯಲು ಬರಬೇಕೆಂದು ಕರೆದಿಲ್ಲ .

ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ವಿವರಗಳನ್ನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತಿನಲ್ಲಿ ವಾದಿ ಸಣ್ಣೀರಮ್ಮ ಮತ್ತು ಮಕ್ಕಳು ಸ್ವಾಧೀನದಲ್ಲಿದ್ದಾರೆ . ದವಾ ಸ್ವತ್ತಿನಲ್ಲಿ ಅಡಿಕೆ ಮತ್ತು ತೆಂಗಿನ ಮರಗಳು ಇರುತ್ತವೆ . ಅಡಿಕೆ ಮರಗಳು ಮತ್ತು ತೆಂಗಿನ ಮರಗಳು ಸುಮಾರು 10-12 ವರ್ಷ ವಯಸ್ಸಿನವಾಗಿವೆ . ದಾವಾ ಸ್ವತ್ತಿನಲ್ಲಿ 3 ರಿಂದ 5 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ , ಸದರಿ ವಿಚಾರ ತಿಳಿದಿದ್ದರೂ ಸಹಾ ವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳು ಯಾವಾಗ ಪೋಡಿಯಾಗಿವೆ ಎಂದು ಗೊತ್ತಿಲ್ಲ ಮತ್ತು ಅದರ ಪೋಡಿ ಸಂಖ್ಯೆ ಸಹಾ ಗೊತ್ತಿಲ್ಲ . ದಾವಾ ಷೆಡ್ಯೂಲ್ 1 ರಿಂದ 6 ನೇ ಸ್ವತ್ತುಗಳ ಚಕ್ಕುಬಂದಿ ಪೂರ್ವಕ್ಕೆ ಃ ಗೋಪಾಲಯ್ಯ ರವರ ಸ್ವತ್ತು , ಪಶ್ಚಿಮಕ್ಕೆ ಃ ಸಣ್ಣಪ್ಪ ರವರ ಸ್ವತ್ತು , ಉತ್ತರ ಃ ಚನ್ನಬಸವಯ್ಯ ಮತ್ತು ಚಿಕ್ಕೇಗೌಡ ರವರ ಸ್ವತ್ತು , ದಕ್ಷಿಣಕ್ಕೆ ಃ ಈರಚಿಕ್ಕಯ್ಯ ಮತ್ತು ಗ್ರಾಮ ಠಾಣಾ ಸ್ವತ್ತು . ವಾದಿಗಳ ವಂಶವೃಕ್ಷದ ಬಗ್ಗೆ ನನಗೆ ಮಾಹಿತಿ ಇಲ್ಲ . ವಾದಿಗಳು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನವನ್ನು ಹೊಂದಿದ್ದಾರೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ . 3 ರಿಂದ 5 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳಿಗೆ ಸಂಬಂಧಿಸಿ ಖಾತಾ ಮತ್ತು ಪಹಣಿಗಳನ್ನು ಸೃಷ್ಟಿಸಿಕೊಂಡಿದ್ದಾರೆ . ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಪಹಣಿಗಳಲ್ಲಿ 3 ರಿಂದ 5 ನೇ ಪ್ರತಿವಾದಿಗಳ ಹೆಸರು ಇದ್ದು ಅವರು ಅಡಿಕೆ ಮತ್ತು ತೆಂಗಿನ ಬೆಳೆ ಬೆಳೆದಿದ್ದಾರೆ ಎಂದು ಅದರಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸುಳ್ಳು ವಿವರಗಳು ಎಂದು ತಿಳಿಸಿದ್ದಾರೆ . ವಾದಿಗಳಿಗೆ ಅನುಕೂಲವಾಗಲೆಂದು ಮತ್ತು 3 ರಿಂದ 5 ನೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ವಿವರಗಳ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ,  ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ.